# ಪ್ರಧಾನ ಮಂತ್ರಿ ಸುರಕ್ಷಾ ಬೀಮಾ ಯೋಜನೆ (ಪಿಎಮ್‌ಎಸ್‌ಬಿವೈ)
## ಕ್ಲೇಮ್ ಪ್ರಕ್ರಿಯೆ

ಈ ಅರ್ಜಿಯನ್ನು ಯಾವುದೇ ಒಪ್ಪಂದಕ್ಕೆ ಒಳಗಾಗದೆ ನೀಡಲಾಗಿರುತ್ತದೆ. ಈ ಅರ್ಜಿಯನ್ನು ಪೂರ್ಣವಾಗಿ ಭರ್ತಿ ಮಾಡಿ ವಿಮೆ ಮಾಡಿಸಿರುವ ವ್ಯಕ್ತಿಯು ಖಾತೆಯನ್ನು ಹೊಂದಿರುವ ಬ್ಯಾಂಕಿನ ಶಾಖೆಗೆ ಸಲ್ಲಿಸುವುದು. ಕ್ಲೇಮ್ ಪಡೆದುಕೊಳ್ಳುವುದಕ್ಕೆ ಅಪಘಾತವಾದ ೩೦ ದಿನಗಳ ಒಳಗಾಗಿ ಸಲ್ಲಿಸುವುದು ಉತ್ತಮ.

| | | |
|---|---|---|
| 1 | ಖಾತೆದಾರರ ಹೆಸರು (ವಿಮಾದಾರ) | |
| 2 | ವಿಮಾದಾರರ ಪೂರ್ಣ ವಿಳಾಸ:‘ | |
| 3 | ಬ್ಯಾಂಕಿನ ಶಾಖೆಯ ಹೆಸರು ಮತ್ತು ವಿಳಾಸ | |
| 4 | ಉಳಿತಾಯ ಖಾತೆ ಸಂಖ್ಯೆ: | |
| 5 | ವಿಮಾದಾರರ ಸಂಪರ್ಕ ವಿವರಗಳು (ಲಭ್ಯವಿದ್ದಲ್ಲಿ)<br>ಮೊಬೈಲ್ ನಂ.<br>ದೂರವಾಣಿ ಸಂಖ್ಯೆ:<br>ಇ–ಮೇಲ್ ವಿಳಾಸ:<br>ಆಧಾರ್ ಕಾರ್ಡ್ ನಂ. (ಲಭ್ಯವಿದ್ದಲ್ಲಿ) | |
| 6 | ನಾಮಿನಿಯ ವಿವರಗಳು (ವಿಮಾದಾರರು ಮೃತಪಟ್ಟಿದ್ದಲ್ಲಿ)<br>ಹೆಸರು:<br>ಮೊಬೈಲ್/ದೂರವಾಣಿ ಸಂಖ್ಯೆ:<br>ಇ–ಮೇಲ್ ವಿಳಾಸ:<br>ಬ್ಯಾಂಕ್ ಖಾತೆಯ ವಿವರಗಳು (ಎಲೆಕ್ಟ್ರಾನಿಕ್ ವರ್ಗಾವಣೆಗಾಗಿ)<br>ಆಧಾರ್ ಕಾರ್ಡ್ ನಂ. (ಲಭ್ಯವಿದ್ದಲ್ಲಿ) | |
| 7 | ಅಪಘಾತದ ವಿವರಗಳು:<br>ಎ). ಘಟನೆ ಸಂಭವಿಸಿದ ದಿನ, ದಿನಾಂಕ ಮತ್ತು ಸಮಯ<br>ಬಿ) ಘಟನೆ ಎಲ್ಲಿ ನಡೆಯಿತು<br>ಸಿ) ಅಪಘಾತದ ಸ್ವಭಾವ<br>ಡಿ) ಮರಣಕ್ಕೆ ಕಾರಣ/ಗಾಯಗಳ ವಿವರ | |
| 8 | ಆಸ್ಪತ್ರೆಯ ಹೆಸರು, ವಿಳಾಸ ಮತ್ತು ಸಂಪರ್ಕದ ವಿವರಗಳು/ ಚಿಕಿತ್ಸೆ ನೀಡಿದ ಡಾಕ್ಟರ್ | |
| 9 | ಕಂಪನಿಯ ಪರವಾಗಿ ವೈದ್ಯಕೀಯ ಅಧಿಕಾರಿ ಅಥವಾ ಇತರೆ ಅಧಿಕಾರಿಯವರು ಎಲ್ಲಿ ಮತ್ತು ಯಾವ ಸಮಯದಲ್ಲಿ ವಿಮಾದಾರರನ್ನು ಭೇಟಿ ಮಾಡಬಹುದು. | |
| 10 | ಕ್ಲೇಮ್ ಪಡೆಯುವುದಕ್ಕಾಗಿ ಸಲ್ಲಿಸಬೇಕಾದ ದಾಖಲಾತಿಗಳು<br>ಎ) ಮೃತಪಟ್ಟಲ್ಲಿ : ಎಫ್‌ಐಆರ್ ಮೂಲ ಪ್ರತಿ/ ಪಂಚನಾಮ/ ಪೋಸ್ಟ್ ಮಾರ್ಟಮ್ ವರದಿ ಮತ್ತು ಮರಣ ಪ್ರಮಾಣ ಪತ್ರ.<br>ಬಿ) ಶಾಶ್ವತ ವಿಕಲತೆ ಹೊಂದಿದಲ್ಲಿ : ಎಫ್‌ಐಆರ್ ಮೂಲ ಪ್ರತಿ/ ಪಂಚನಾಮ/ ಸಿವಿಲ್ ಸರ್ಜನ್ ರವರಿಂದ ವೈಕಲ್ಯತೆಯ ಪ್ರಮಾಣ ಪತ್ರ.<br>ಸಿ) ಬಿಡುಗಡೆ ಓಚರ್ (ಡಿಸ್ಚಾರ್ಜ್) | |

ಘೋಷಣೆ: ಈ ಮೇಲ್ಕಂಡ ಎಲ್ಲಾ ಅಂಶಗಳೂ ಸಹ ಎಲ್ಲಾ ವಿಧದಲ್ಲಿಯೂ ಪೂರ್ಣವಾಗಿ ಮತ್ತು ಸತ್ಯವಾಗಿರುತ್ತವೆ. ಒಂದು ವೇಳೆ ನಾನು ನೀಡಿರುವ ಮಾಹಿತಿಗಳು ಅಸತ್ಯ ಅಥವಾ ಅಪೂರ್ಣವೆಂದು ಕಂಡು ಬಂದು, ನಾನು ಯಾವುದೇ ಮಾಹಿತಿಯನ್ನು ಮುಚ್ಚಿಟ್ಟಿದ್ದು ಕಂಡು ಬಂದಲ್ಲಿ ನನ್ನ ಕ್ಲೇಮನ್ನು ಮುಟ್ಟುಗೋಲು ಹಾಕಿಕೊಳ್ಳಬಹುದೆಂದು ಒಪ್ಪಿರುತ್ತೇನೆ. ನಾನು ಇದುವರೆಗೂ ಯಾವುದೇ ವಿಧದಲ್ಲಿಯೂ ಪಿ.ಎಂ.ಎಸ್.ಬಿ.ವೈ ಯೋಜನೆಯ ಅಡಿಯಲ್ಲಿ ಕ್ಲೇಮನ್ನು ಪಡೆದುಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ ಕ್ಲೇಮುದಾರರ/ನಾಮಿನಿಯವರ ಸಹಿ

**ಕಛೇರಿ ಉಪಯೋಗಕ್ಕೆ:**

| | | | |
|---|---|---|---|
| ಪಾಲಿಸಿ ನಂ. | | | |
| | | | |

ಬ್ಯಾಂಕ್ ಖಾತೆ ಮತ್ತು ನಾಮಿನಿಯವರಿಗೆ ಸಂಬಂಧಪಟ್ಟಂತೆ ಸಲ್ಲಿಸಿರುವ ಮಾಹಿತಿಯನ್ನು ಪರಿಶೀಲಿಸಲಾಗಿದೆ ಎಂದು ದೃಢೀಕರಿಸಿದೆ. ಪ್ರೀಮಿಯಂ ಅನ್ನು ಬ್ಯಾಂಕ್ ಖಾತೆಗೆ ದಿನಾಂಕ: ___________ ರಂದು ಜಮಾ ಮಾಡಲಾಗಿದೆ ಮತ್ತು ದಿನಾಂಕ:

## ಪ್ರಧಾನ ಮಂತ್ರಿ ಸುರಕ್ಷಾ ಬೀಮಾ ಯೋಜನೆ (ಪಿಎಮ್‌ಎಸ್‌ಬಿವೈ)
## ಕ್ಲೇಮ್ ಪ್ರಕ್ರಿಯೆ

ಕ್ಲೇಮ್ ನಂ. (ಬ್ಯಾಂಕಿನವರು ಭರ್ತಿ ಮಾಡತಕ್ಕದ್ದು) ಪಾಲಿಸಿ ನಂ.

ಬ್ಯಾಂಕಿನ/ಶಾಖೆಯ ಹೆಸರು ವಿಮಾದಾರರ ಹೆಸರು

ವಿಮಾದಾರರ ಬ್ಯಾಂಕ್ ಖಾತೆ ನಂ. ದಿನಾಂಕ:

ಈ ಮೇಲ್ಕಂಡ ನನ್ನ ಕ್ಲೇಮನ್ನು ಅನುಮೋದಿಸಿದ ನಂತರ, ನಾನು/ನಾವು (ವಿಮಾ ಕಂಪನಿಯ ಹೆಸರು) ರವರಿಂದ ರೂ.(ಅನುಮೋದಿತ ಮೊತ್ತ) ಗಳನ್ನು ಪೂರ್ಣವಾಗಿ ________________ ರಂದು ಸಂಭವಿಸಿದ ____________________ (ಘಟನೆಯ ದಿನಾಂಕ) ಕ್ಕೆ ಸಂಬಂಧಪಟ್ಟಂತೆ ಪಡೆದುಕೊಂಡಿರುತ್ತೇನೆ/ವೆ. ಪಾಲಿಸಿ ನಂ.________________, ದಿನಾಂಕ: _____________ ರಿಂದ ___________ ರವರೆಗೆ.

ನಾನು/ನಾವು ನನ್ನ/ನಮ್ಮ ಸ್ವಇಚ್ಛೆಯಿಂದ ಈ ಬಿಡುಗಡೆ ರಸೀತಿಯನ್ನು ಕಂಪನಿಯವರಿಗೆ ಸದರಿ ಅಪಘಾತ/ನಷ್ಟಕ್ಕೆ ಸಂಬಂಧಪಟ್ಟಂತೆ ಹಾಲಿ ಹಾಗೂ ಮುಂದೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬರಬಹುದಾದ ಎಲ್ಲಾ ಕ್ಲೇಮುಗಳಿಗೆ ಸಂಬಂದಪಟ್ಟಂತೆ ನೀಡುತ್ತಿದ್ದೇನೆ/ವೆ. ಈ ಮೇಲ್ಕಂಡ ಎಲ್ಲಾ ನಷ್ಟ/ಡ್ಯಾಮೇಜುಗಳಿಗೆ ಸಂಬಂಧಪಟ್ಟಂತೆ ನನ್ನ/ನಮ್ಮ ಎಲ್ಲಾ ಅಧಿಕಾರ/ಹಕ್ಕುಗಳನ್ನು ಕಂಪನಿಯವರಿಗೆ ಬಿಟ್ಟುಕೊಟ್ಟಿರುತ್ತೇನೆ.

ಒಂದು ರೂಪಾಯಿ ರೆವಿನ್ಯೂ ಸ್ಟಾಂಪ್

ನಾಮಿನಿ/ವಿಮಾದಾರರ ಸಹಿ

ಪೂರ್ಣ ಹೆಸರು:
ವಿಳಾಸ:
ನಾಮಿನಿಯವರ ಖಾತೆ ಸಂಖ್ಯೆ:

ಸಾಕ್ಷಿದಾರು:
ಪೂರ್ಣ ಹೆಸರು:
ವಿಳಾಸ:

ಬ್ಯಾಂಕಿನ ಅಧಿಕಾರಿಯವರ ಸಹಿ

ಬ್ಯಾಂಕಿನ ಹೆಸರು ಮತ್ತು ಶಾಖೆ
ವಿಳಾಸ:

# ಪ್ರಧಾನ ಮಂತ್ರಿ ಸುರಕ್ಷಾ ಬೀಮಾ ಯೋಜನೆ (ಪಿಎಮ್‌ಎಸ್‌ಬಿವೈ)
## ಕ್ಲೇಮ್ ಪ್ರಕ್ರಿಯೆ

1. ಅಪಘಾತ ಸಂಭವಿಸಿದ ಕೂಡಲೇ ವಿಮಾದಾರರು ಅಥವಾ ನಾಮಿನಿದಾರರು (ವಿಮಾದಾರರು ಮೃತಪಟ್ಟಿದ್ದಲ್ಲಿ), ವಿಮಾದಾರರು ಖಾತೆಯನ್ನು ಹೊಂದಿದ್ದು, ಯಾವ ಬ್ಯಾಂಕಿನ ಮೂಲಕ ಪ್ರೀಮಿಯಂ ಕಡಿತಗೊಳಿಸಿ ವಿಮಾ ಕಂಪನಿಗೆ ಜಮಾ ಮಾಡಲಾಗಿದೆಯೋ ಆ ಬ್ಯಾಂಕನ್ನು ಸಂಪರ್ಕಿಸುವುದು.

2. ಕ್ಲೇಮ್ ಫಾರಂಗಳನ್ನು ಮೇಲ್ಕಂಡ ಬ್ಯಾಂಕಿನ ಶಾಖೆ ಅಥವಾ ಇತರೆ ಮೂಲಗಳು ಅಂದರೆ ಇನ್ಸೂರೆನ್ಸ್ ಕಂಪನಿ ಶಾಖೆಗಳು, ಆಸ್ಪತ್ರೆಗಳು, ಪಿಹೆಚ್‌ಸಿ, ಬಿಸಿ, ವಿಮಾ ಏಜೆಂಟ್ ಮುಂತಾದ ಮೂಲಗಳಿಂದ ಪಡೆದುಕೊಳ್ಳಬಹುದು ಮತ್ತು ಸಂಬಂಧಪಟ್ಟ ವೆಬ್‌ಸೈಟ್ ಗಳಿಂದಲೂ ಸಹ ಪಡೆದುಕೊಳ್ಳಬಹುದು. ವಿಮಾ ಕಂಪನಿಯವರು ಅಂತಹ ಕ್ಲೇಮ್ ಫಾರಂಗಳನ್ನು ಸೂಕ್ತ ರೀತಿಯಲ್ಲಿ ಯಾವುದೇ ತೊಂದರೆ ಇಲ್ಲದಂತೆ ಎಲ್ಲಾ ಕಡೆಗಳಲ್ಲೂ ದೊರೆಯುವಂತೆ ಕ್ರಮ ವಹಿಸುವುದು. ಯಾವುದೇ ವ್ಯಕ್ತಿಯು ಅಂತಹ ಫಾರಂಗಳಿಗೆ ಬೇಡಿಕೆ ಇಟ್ಟಲ್ಲಿ ತಿರಸ್ಕರಿಸುವಂತಿಲ್ಲ

3. ಕ್ಲೇಮ್ ಫಾರಂ ಅನ್ನು ವಿಮಾದಾರರು ಅಥವಾ, ಸಂದರ್ಭಾನುಸಾರ ನಾಮಿನಿ ಯವರು ಭರ್ತಿ ಮಾಡಿ ಮೇಲ್ಕಂಡ ಬ್ಯಾಂಕಿನ ಶಾಖೆಗೆ ಅಪಘಾತ ಸಂಭವಿಸಿದ 30 ದಿನಗಳ ಒಳಗಾಗಿ ಸದರಿ ಪಾಲಿಸಿಯ ಅಡಿಯಲ್ಲಿ ಕ್ಲೇಮನ್ನು ಪಡೆದುಕೊಳ್ಳುವ ಸಲುವಾಗಿ ಸಲ್ಲಿಸುವುದು.

4. ಒಂದು ವೇಳೆ ವಿಮಾದಾರರು ಮರಣ ಹೊಂದಿದ್ದಲ್ಲಿ, ಕ್ಲೇಮ್ ಫಾರಂ ಜೊತೆಯಲ್ಲಿ ಎಫ್.ಐ.ಆರ್. ಮೂಲ ಪ್ರತಿ ಪಂಚನಾಮ, ಪೋಸ್ಟ್ ಮಾರ್ಟಮ್ ವರದಿ ಮತ್ತು ಮರಣ ಪ್ರಮಾಣ ಪತ್ರವನ್ನು ಸಲ್ಲಿಸುವುದು. ಒಂದು ವೇಳೆ ಶಾಶ್ವತ ಅಂಗವೈಕಲ್ಯತೆ ಉಂಟಾದಲ್ಲಿ ಎಫ,ಐ.ಆರ್. ಮೂಲ ಪ್ರತಿ, ಪಂಚನಾಮ ಮತ್ತು ಸಿವಿಲ್ ಸರ್ಜನ್ ರವರಿಂದ ಅಂಗವೈಕಲ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು. ಕ್ಲೇಮುದಾರ/ ನಾಮಿನಿಯವರು ಇದರೊಂದಿಗೆ ಲಗತ್ತಿಸಿರುವ ಡಿಸ್ಚಾರ್ಜ್ ಸರ್ಟಿಫಿಕೇಟ್ (ಬಿಡುಗಡೆ ಪ್ರಮಾಣ ಪತ್ರ) ವನ್ನು ಸಹ ಸಲ್ಲಿಸುವುದು.

5. ಬ್ಯಾಂಕಿನ ಅಧಿಕಾರಿಯವರು ಖಾತೆ/ಅಟೋ ಡೆಬಿಟ್ ವಿವರಗಳು, ಖಾತೆಯ ವಿವರಗಳು, ನಾಮಿನೇಷನ್, ಪ್ರೀಮಿಯಂ ಕಡಿತಗೊಂಡಿರುವುದು/ ವಿಮಾದಾರರಿಂದ ಪಾವತಿ ಮಾಡಿರುವುದು ಇವುಗಳನ್ನು ಪರಿಶೀಲಿಸಿ ದೃಢೀಕರಿಸುತ್ತಾರೆ ಮತ್ತು ಸಲ್ಲಿಸಿರುವ ಮಾಹಿತಿಗಳ ಸತ್ಯಾಸತ್ಯತೆಯ ಬಗ್ಗೆ ಪರಿಶೀಲಿಸಿ ಅವುಗಳನ್ನು ಸಂಬಂಧಪಟ್ಟ ವಿಮಾ ಕಂಪನಿಗೆ 30 ದಿನಗಳ ಒಳಗಾಗಿ ಸಲ್ಲಿಸುತ್ತಾರೆ.

6. ವಿಮಾ ಕಂಪನಿಯವರು ಸದರಿ ವಿಮಾದಾರರು ಪ್ರೀಮಿಯಂ ಅನ್ನು ಪಾವತಿ ಮಾಡಿದ್ದಾರೆಯೇ ಮತ್ತು ಮಾಸ್ಟರ್ ಪಾಲಿಸಿಯ ವಿಮಾದಾರರ ಪಟ್ಟಿಯಲ್ಲಿ ಸದರಿ ವಿಮಾದಾರರನ್ನು ಸೇರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಿ ದೃಢೀಕರಿಸುತ್ತಾರೆ.

7. ಕ್ಲೇಮನ್ನು, ಮಾಸ್ಟರ್ ಪಾಲಿಸಿಯನ್ನು ವಿತರಣೆ ಮಾಡಿದ ಇನ್ಸೂರೆನ್ಸ್ ಕಂಪನಿಯು ಸಂಬಂಧಪಟ್ಟ ಬ್ಯಾಂಕ್‌ರವರಿಂದ ಮಾಹಿತಿಯನ್ನು ಪಡೆದುಕೊಂಡು 30 ದಿನಗಳ ಒಳಗಾಗಿ ನೀಡತಕ್ಕದ್ದು.

8. ಪಾವತಿ ಮಾಡಬೇಕಾದ ಕ್ಲೇಮ್ ಮೊತ್ತವನ್ನು ವಿಮಾದಾರರ ಬ್ಯಾಂಕ್ ಖಾತೆಗೆ ಅಥವಾ ಸಂದರ್ಭಾನುಸಾರ ಅವರ ನಾಮಿನಿಯವರ ಖಾತೆಗೆ ಜಮಾ ಮಾಡಲಾಗುವುದು.

9.ಒಂದು ವೇಳೆ ವಿಮಾದಾರರು ಮೃತಪಟ್ಟು, ಅವರು ನಾಮಿನಿಯನ್ನಾಗಿ ಯಾರನ್ನು ನೇಮಿಸದೇ ಇದ್ದ ಪಕ್ಕದಲ್ಲಿ ಅಂತವರ ವಾರಸುದಾರರಾಗಿ ಸಂಬಂಧ ಪಟ್ಟ ನ್ಯಾಯಾಲಯ/ ಇಲಾಖೆಯಿಂದ ವಾರಸುದಾರರ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ಪಾವತಿಸ ಲಾಗುವುದು.

10. ಬ್ಯಾಂಕಿನವರು ಭರ್ತಿಮಾಡಿದ ಅರ್ಜಿಯನ್ನು ವಿಮಾ ಕಂಪನಿಗೆ ಸಲ್ಲಿಸಲು ಗರಿಷ್ಠ 30 ದಿನಗಳ ಕಾಲಾವಧಿ ಇದ್ದು, ವಿಮಾ ಕಂಪನಿಯು ಸದರಿ ಕ್ಲೇಮ್ ಅನ್ನು ಅನುಮೋದಿಸಿ ಹಣವನ್ನು ಪಾವತಿ ಮಾಡಲು ಆ ನಂತರದ ಗರಿಷ್ಠ 30 ದಿನಗಳನ್ನು ನಿಗದಿಪಡಿಸಲಾಗಿರುತ್ತದೆ.